ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ

ಓ.ಎಸ್. ಸಂಖ್ಯೆ**285/2018**

ದಿನಾಂಕ **06.08.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿ ತೆಲುಗು ಭಾಷೆ ಬಲ್ಲವರಾಗಿದ್ದು, ಕನ್ನಡ ಭಾಷೆ ಸರಿಯಾಗಿ ಬಾರದ ಕಾರಣ ಶ್ರೀ. ಶ್ರೀ ಶರಣ್ ಶಾನುಭೋಗ್.ಎ.ಆರ್ ವಕೀಲರನ್ನು ಭಾಷಾಂತರಕಾರರನ್ನಾಗಿ ನೇಮಿಸಿ, ಪ್ರಮಾಣ ವಚನ ಬೋಧಿಸಿ ಸಾಕ್ಷಿಯ ಸಾಕ್ಷವನ್ನು ಬರೆದುಕೊಳ್ಳಲಾಯಿತು.

ಪಿ.ಡಬ್ಲ್ಯೂ-2

ಪಾಟೀ ಸವಾಲುಃ **1** ರಿಂದ **5** ನೇ ಪ್ರತಿವಾದಿಗಳ ಪರ ಶ್ರೀ ಆರ್.ವಿ ವಕೀಲರಿಂದಃ

ವಾದಿ ನನ್ನನ್ನು ಈ ದಿನ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ವಾದಿ ನನ್ನ ಪರಿಚಯದವರು. ಅವರು ನನ್ನ ಸಂಬಂಧಿಕರಲ್ಲ. ಪ್ರತಿವಾದಿಗಳ ಹೆಸರನ್ನು ಹೇಳಲು ಆಗುತ್ತದೆಯಾ ಎಂದರೆ ಹನುಮಂತಪ್ಪ ರಾಮಾಂಜಿನಪ್ಪನ ಮೇಲೆ ಮತ್ತು ಅವರ ಅಣ್ಣ ತಮ್ಮಂದಿರ ಮೇಲೆ ದಾವೆ ಸಲ್ಲಿಸಿದ್ದಾರೆ. ರಾಮಾಂಜಿನಪ್ಪನ ಅಣ್ಣ-ತಮ್ಮಂದಿರ ಹೆಸರು ನನಗೆ ಹೇಳಲು ಆಗುವುದಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದ ವಿಚಾರ ನನಗೆ ತಿಳಿದಿದೆ ದಾವಾ ಆಸ್ತಿಯ ಪೂರ್ವಕ್ಕೆ ನಂಜಮ್ಮ ರವರ ಜಮೀನು, ಪಶ್ಚಿಮಕ್ಕೆ ಪರಶುರಾಮಪ್ಪ ರವರ ಜಮೀನು, ಉತ್ತರಕ್ಕೆ ಸಂಜೀವಮ್ಮ ರವರ ಜಮೀನು ಮತ್ತು ದಕ್ಷಿಣಕ್ಕೆ ಪಾವಗಡ-ಪೆನುಗೊಂಡ ರಸ್ತೆ.

2. ದಾವಾ ಆಸ್ತಿ ಮೊದಲು ವಾದಿಗೆ ಸೇರಿದ್ದು, ಅದು ಅವರ ತಾಯಿಯಿಂದ ಅವರಿಗೆ ಬಂದಿರುತ್ತದೆ. ದಾವಾ ಆಸ್ತಿ ಒಟ್ಟು 2 ಎಕರೆ 20 ಗುಂಟೆ ಜಾಗ ಇದೆ. ವಾದಿ ರೂ.12,000/- ಹಣಕ್ಕೆ ಪ್ರತಿವಾದಿಗಳ ತಾಯಿ ಸಂಜೀವಮ್ಮನಿಗೆ ದಿ.16.06.1990 ರಂದು ಕ್ರಯ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸುಳ್ಳು. ದಾವಾ ಆಸ್ತಿಯ ಪಹಣಿಯನ್ನು ನಾನು ನೋಡಿದ್ದೇನೆ. ಸದರಿ ದಾವಾ ಸ್ವತ್ತಿನ ಪಹಣಿಗಳು ವಾದಿ ಹೆಸರಿನಲ್ಲಿ ಇದೆ. ಪ್ರತಿವಾದಿಗಳ ತಾಯಿ ಸಂಜೀವಮ್ಮ ಕ್ರಯಕ್ಕೆಪಡೆದ ದಿನದಿಂದಲೂ ಅವರೇ ಸ್ವಾಧೀನದಲ್ಲಿ ಇದ್ದಾರೆ ಹಾಗೂ ಕಂದಾಯ

ದಾಖಲೆಗಳು ಅವರ ಹೆಸರಿಗೆ ವರ್ಗಾವಣೆ ಆಗಿವೆ ಎಂದರೆ ಸುಳ್ಳು. 1990 ರಿಂದಲೂ ಸಂಜೀವಮ್ಮ ನ ಹೆಸರಿನಲ್ಲಿ ದಾವಾ ಸ್ವತ್ತು ಬರುತ್ತಿದೆ ನಾನು ಪಹಣಿ ನೋಡದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಂಜೀವಮ್ಮ ಜೀವಂತ ಇದ್ದಾಗ ಸಂಜೀವಮ್ಮನೇ ದಾವಾ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿದ್ದರು, ಸಂಜೀವಮ್ಮ ತೀರಿಕೊಂಡ ನಂತರ ಅವರ ಮಕ್ಕಳು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸುಳ್ಳು. ಸಂಜೀವಮ್ಮನ ನಂತರ ಪ್ರತಿವಾದಿ 1 ರಿಂದ 5 ರವರಿಗೆ ದಾವಾ ಸ್ವತ್ತಿನ ಖಾತೆ ಜಂಟಿಯಾಗಿ ಆಗಿದೆ ಎಂದರೆ ಸುಳ್ಳು. ಸಂಜೀವಮ್ಮ ತೀರಿಕೊಂಡ ನಂತರ 1 ರಿಂದ 5ನೇ ಪ್ರತಿವಾದಿಗಳೇ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಅವರೆ ಹಕ್ಕುದಾರರು ಎಂದರೆ ಸುಳ್ಳು. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ, ತೆಲುಗು ಓದುತ್ತೇನೆ.

ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ